ಇದರಲ್ಲಿ ಶಾಮೀಲಾಗಿರಬಹುದು ಎನ್ನುವ ಬಗ್ಗೆ ನಾವು ವಿಚಾರಣೆ ಮಾಡುತ್ತಿದ್ದೇವೆ. ಏಕೆಂದರೆ ನಾವು ಪುಸ್ತಕದ ವ್ಯಾಲ್ಯುಯೇಶನ್ ವೆರಿಫಿಕೇಶನ್ ಮಾಡಿದಾಗ 6 ಕೋಟಿ ರೂಪಾಯಿಗಳು ಖರ್ಚಾಗತಕ್ಕಂಥದ್ದನ್ನು ನಾವು ಇನ್ಸ್‌ಪೆಕ್ಷನ್ ಮಾಡಿ ಹಿಡಿದಾಗ ಅದನ್ನು ನಾವು 4 ಕೋಟಿ ರೂ.ಗಳಿಗೆ ತಂದಿದ್ದೇವೆ. ಪುಸ್ತಕದ ರೇಟನ್ನು ಬದಲಾವಣೆ ಮಾಡತಕ್ಕಂಥ ಜಾಲ ಇದು ಅಧಿಕಾರಿಗಳ ಮಟ್ಟದಲ್ಲಿ ಇಲ್ಲ. ಹೊರಗಡೆ ಇರತಕ್ಕಂಥ ಪಬ್ಲಿಷರ್, ಹೊರಗಡೆ ಇರತಕ್ಕಂಥ ಮುದ್ರಣಕಾರರು ಅವರೂ ಕೂಡ ಇದರಲ್ಲಿ ಶಾಮೀಲಾಗಿದ್ದಾರೆ. ಇದು ಎಲ್ಲರೂ ಕೂಡಿ ಮಾಡತಕ್ಕಂಥ ಕೆಲಸ. ಇದನ್ನು ನಾವು ಬಿಗಿಯಾಗಿ ಹಿಡಿದು ಶೀಘ್ರದಲ್ಲಿಯೇ ಪುಸ್ತಕಗಳನ್ನು ಬಿಡುಗಡೆ ಮಾಡುತ್ತೇವೆ.

ರಾಜ್ಯದಲ್ಲಿ 'ಅಕ್ಷರ ದಾಸೋಹ' ಕಾರ್ಯಕ್ರಮದ ಅನುಷ್ಠಾನ

536 (4733) : ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಕ್ಷರ ದಾಸೋಹ ಕಾರ್ಯ ಕ್ರಮದ ಅನುಷ್ಠಾನ ವ್ಯವಸ್ಥೆಯಲ್ಲಿ ಕಂಡು ಬಂದಿರುವ ನ್ಯೂನತೆಗಳನ್ನು ನಿವಾರಿಸಿ ಈ ಕಾರ್ಯಕ್ರಮವನ್ನು ಮತ್ತಷ್ಟು ಅರ್ಥವತ್ತಾಗಿ ಅನುಷ್ಠಾನಗೊಳಿಸಲು ಸರ್ಕಾರವು ವಿಶೇಷ ಕ್ರಮಗಳೇನಾದರೂ ರೂಪಿಸಿದೆಯೇ;

ಆ) ರೂಪಿಸಿದ್ದಲ್ಲಿ, ಇದರ ವಿವರಗಳೇನು?

ಪ್ರೊ: ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು): ಅ) ಮತ್ತು ಆ) ಅಕ್ಷರ ದಾಸೋಹ ಕಾರ್ಯಕ್ರಮವನ್ನು ಇನ್ನೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಗಳನ್ನು ರಚಿಸಲಾಗಿದೆ.

1. ಮುಖ್ಯ ಕಾರ್ಯದರ್ಶಿಗಳು, ಮತ್ತು ಶಿಕ್ಷಣ ಇಲಾಖೆ ಕಾರ್ಯದರ್ಶಿಗಳು ಇವರುಗಳಿಂದ ಅಕ್ಷರ ದಾಸೋಹ ಯೋಜನೆಗೆ ಸಂಬಂಧಪಟ್ಟ ಹಲವಾರು ವಿಷಯಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದೆ.

2. ಗ್ಯಾಸ್ ಮತ್ತು ಸಿಲಿಂಡರ್‌ಗಳ ಬಳಕೆ, ಶುಚಿತ್ವ, ಅಡುಗೆ ಮಾಡುವುದು ಮತ್ತು ಬಡಿಸುವುದು, ಅಡುಗೆಯವರಿಗೆ ತರಬೇತಿ

3. ಎಸ್.ಡಿ.ಎಂ.ಸಿ.ಗಳಿಗೆ ಅಕ್ಷರ ದಾಸೋಹ ಕಾರ್ಯಕ್ರಮದ ಮೇಲ್ವಿಚಾರಣೆ ನಡೆಸಲು ಎಸ್.ಡಿ.ಎಂ.ಸಿ.ಗಳಿಗೆ ಸೂಚಿಸಲಾಗಿದೆ.

4. ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕಗಳ ವೈದ್ಯರು ಅಡಿಗೆ ಕೇಂದ್ರದ ಶುಚಿತ್ವದ ಬಗ್ಗೆ ಪರಿಶೀಲನೆ ನಡೆಸಲು ಕ್ರಮ.

5. ಶುದ್ಧ ಕುಡಿಯುವ ನೀರನ್ನು ಒದಗಿಸುವುದು.

6. ಊಟವನ್ನು ಮಕ್ಕಳಿಗೆ ಬಡಿಸುವ ಮುಂಚೆ ಮುಖ್ಯೋಪಾಧ್ಯಾಯರು ಮೊದಲು ಊಟ ಮಾಡಿ ಗುಣಮಟ್ಟ ಖಚಿತಪಡಿಸಿಕೊಳ್ಳುವ ಬಗ್ಗೆ ಕ್ರಮ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ ಈ ಒಂದು ಅಕ್ಷರ ದಾಸೋಹ ಕಾರ್ಯಕ್ರಮ ಏನಿದೆ ಇದು ಬಹಳ ಹೆಗ್ಗಳಿಕೆಯ ಕಾರ್ಯಕ್ರಮ. ಇದರ ನೂನ್ಯತೆಗಳನ್ನು ನಿವಾರಿಸಿ ಅನೇಕ ಸೌಲಭ್ಯಗಳನ್ನು ನೀಡುತ್ತಿದ್ದೇವೆಂದು ಸರ್ಕಾರದ ಉತ್ತರದಲ್ಲಿ ತಿಳಿಸಿದ್ದಾರೆ. ಈ ಒಂದು

ಕಾರ್ಯಕ್ರಮದಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಈ ಒಂದು ಅಡುಗೆ ಕೊಠಡಿ ಎಷ್ಟೋ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇರುವುದಿಲ್ಲ, ಶೌಚಾಲಯದ ವ್ಯವಸ್ಥೆ ಇರುವುದಿಲ್ಲ. ಈ ಬಗ್ಗೆ ಸರ್ಕಾರ ಏನು ಆಲೋಚನೆ ಮಾಡಿದೆ ಎನ್ನುವುದನ್ನು ನಾನು ಕೇಳಬಯಸುತ್ತೇನೆ. ಹಾಲು ಕೊಡುತ್ತಿರುವ ಪರಿಕರ ಒಂದು ಮಗುವಿಗೆ ತಲಾ 20 ಪೈಸೆಯಾಗಿರತಕ್ಕಂಥದ್ದು. ಆ ಒಂದು 20 ಪೈಸೆಯಲ್ಲಿ ಸಮಗ್ರವಾಗಿ ಊಟ ಬಡಿಸುವುದಕ್ಕೆ ತೊಂದರೆಯಾಗುತ್ತದೆ. ಮತ್ತು ಈ ಒಂದು ಶಿಕ್ಷಕರ ಹೆಚ್ಚಿನ ಸಮಯ ಅಕ್ಷರ ದಾಸೋಹ ಕಾರ್ಯಕ್ರಮದ ಉಸ್ತುವಾರಿ ಮೇಲೆ ಇರುತ್ತದೆ. ಆದ್ದರಿಂದ ಮಕ್ಕಳ ದೃಷ್ಟಿಯಿಂದ ಇದು ಸರಿಯಲ್ಲ. ಇದಕ್ಕೆ ಶಿಕ್ಷಕರು ಹೆಚ್ಚಿನ ವೇಳೆಯನ್ನು ಮೀಸಲಾಗಿಟ್ಟಿರುವುದರಿಂದ ಗುಣಾತ್ಮಕ ಕಲಿಕೆಯಲ್ಲಿ ತೊಡಕಾಗಿರುತ್ತದೆ. ಇದನ್ನು ಹೇಗೆ ಪರಿಹರಿಸುತ್ತೀರಿ? ಈ ಬಗ್ಗೆ ಸರ್ಕಾರ ಏನು ಆಲೋಚನೆ ಮಾಡಿದೆ ಎನ್ನುವುದನ್ನು ತಿಳಿಸಬೇಕೆಂದು ನಾನು ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಪ್ರೊ: ಬಿ.ಕೆ. ಚಂದ್ರಶೇಖರ್ : ಮಾನ್ಯ ಅಧ್ಯಕ್ಷರೇ, 3ನೇ ತಾರೀಖಿನವರೆಗೂ ಅಲ್ಲಲ್ಲಿ ನಡೆದ ಘಟನೆಗಳ ಬಗ್ಗೆ ನಾವು ಸಾಕಷ್ಟು ವ್ಯಾಪಕವಾಗಿ ಚರ್ಚೆ ಮಾಡಿದ್ದೇವೆ. ಆದಾದ ಕೂಡಲೇ 4ನೇ ತಾರೀಖು ಒಂದು ಸಭೆಯನ್ನು ವಿಧಾನ ಸೌಧದಲ್ಲಿ ಮಾಡಿದೆವು. ಅದೇ ದಿನ ಸಂಜೆಯಿಂದ ಅತ್ಯಂತ ಕಠಿಣವಾದ ಒಂದು ರೀತಿಯಲ್ಲಿ ಪ್ರತಿಯೊಂದು ಅಡುಗೆ ಕೇಂದ್ರದಲ್ಲಿ ಸೂಪರ್‌ವೈಜ್ ಮಾಡುವ ವ್ಯವಸ್ಥೆಯಾಗಿದ್ದು, ಒಬ್ಬರಲ್ಲ ಒಬ್ಬರು ಜವಾಬ್ದಾರಿಯುತ ಅಧಿಕಾರಿಗಳು ಎಲ್ಲಾ ಕೇಂದ್ರಗಳಲ್ಲೂ ಒಂದು-ಒಂದೂವರೆ ಗಂಟೆ ಸಮಯ ಏನು ಇರುತ್ತದೆ, ಆ ಸಮಯದಲ್ಲಿ ಹಾಜರಿರುತ್ತ ಒಂದು ಪರಿಪಾಠ ಅವತ್ತಿನಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಅದಕ್ಕೆ ಇದು ಇಷ್ಟರಮಟ್ಟಿಗೆ ಸ್ಟೆಬಿಲೈಜ್ ಆಗಿರುವುದು ಎಂದು ನಾನು ಹೇಳುತ್ತೇನೆ. ಈಗ ಸುಮಾರು 90 ಪರ್ಸೆಂಟ್‌ನಷ್ಟು ಎಲ್ಲಾ ಕಡೆಯು ಪಾತ್ರೆಗಳ ಸರಬರಾಜು ಆಗಿದೆ, ಗ್ಯಾಸ್ ಸಿಲಿಂಡರ್‌ಗಳ ಸರಬರಾಜು ಆಗಿದೆ. ಇನ್ನೂ ಕೆಲವು ಜಾಗಗಳಿಗೆ ಆಗಬೇಕು, ನನಗೆ ಬಂದ ಮಾಹಿತಿ ಇನ್ನು 4 ದಿವಸಗಳ ಒಳಗೆ ಈ ತಿಂಗಳ ಕಡೆಯ ಹೊತ್ತಿಗೆ ಬಹುತೇಕ ಭಾಗಗಳಿಗೆ ಸರಬರಾಜು ಆಗುತ್ತದೆ. ಅದಾದ ನಂತರ ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಚಿವರ, ಜಿಲ್ಲಾ ಉಸ್ತುವಾರಿ ಸಚಿವರ ಮಟ್ಟದಲ್ಲಿ ಮತ್ತೊಂದು ಉಸ್ತುವಾರಿ ಸಮಿತಿಯನ್ನು ಮಾಡಿದ್ದಾರೆ. ನಾವು ಸ್ಥಳೀಯ ಶಾಸಕರು ಯಾರಿದ್ದಾರೆ ಅವರನ್ನು ಕೇಳಿಕೊಂಡಿದ್ದೇವೆ. ಜಿಲ್ಲಾ ಪಂಚಾಯತಿ ಅಧ್ಯಕ್ಷರು ಮತ್ತು ಸದಸ್ಯರನ್ನು ಕೇಳಿಕೊಂಡಿದ್ದೇವೆ. ಅವರೆಲ್ಲರೂ ಅವರವರ ವ್ಯಾಪ್ತಿಯಲ್ಲಿ ಬರುವ ಅಡುಗೆ ಕೇಂದ್ರಗಳಿಗೆ ಭೇಟಿ ಕೊಟ್ಟು ಆದೇಶ ಕೂಡ ಮಾಡಲಿ ಎಂದು ಕೇಳಿಕೊಂಡಿದ್ದೇವೆ. ಎಲ್ಲಾದರೂ ತಪ್ಪುಗಳು ಆಗುತ್ತಿದ್ದರೆ ಈ ರೀತಿ ಸರಿಯಾಗಿ ಮಾಡದಿದ್ದರೆ ಆದೇಶ ಮಾಡಬೇಕು ಎಂದು ಹೇಳಿದ್ದೇವೆ. ಪ್ರಾಥಮಿಕ ಆರೋಗ್ಯ ಘಟಕಗಳ ಡಾಕ್ಟರ್‌ಗಳಿಗೆ ಸಹ ಹೇಳಿದ್ದೇವೆ; ಅವರುಗಳು ಹೋಗಿ ಅಲ್ಲಿನ ಕಿಚನ್‌ಗಳನ್ನು ನೋಡಬೇಕು. ಪ್ರತಿದಿನ ಅಥವಾ ವಾರಕ್ಕೆ ಎರಡು ದಿನಗಳಾದರೂ ಹೋಗಿ ಪರಿಶೀಲನೆ ಮಾಡಿ ಈ ರೀತಿ ಇರಬೇಕು ಎಂದು ಹೇಳಿ ಎನ್ನುವಂತಹ ಕೆಲಸವನ್ನು ಮಾಡಿದ್ದೇವೆ. ಅಡುಗೆ ಮಾಡುವವರಿಗೆ ಬಹಳ ಸರಳವಾದ ರೀತಿಯಲ್ಲಿ ನಿರ್ದಿಷ್ಟವಾದ ಒಂದು ಮಾರ್ಗಸೂಚಿಯನ್ನು ಕೊಟ್ಟಿದ್ದೇವೆ ಮತ್ತು ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ಅವರಿಗೆ ಎರಡು ದಿವಸ ತರಬೇತಿಯನ್ನು ಸಹ ಕೊಟ್ಟು 30 ಸಾವಿರ ಅಡುಗೆ ಕೇಂದ್ರಗಳನ್ನು ಸಹ ನಾವು ಮಾಡುತ್ತೇವೆ ಎಂಬ ಒಂದು ಭರವಸೆಯನ್ನು ಕೊಟ್ಟಿದ್ದೇವೆ. ಕೇಂದ್ರ ಸರ್ಕಾರವನ್ನು

ನಾವು ಹಣ ಕೇಳಿದ್ದರೂ ಕೂಡ ಅದು ಬರಲಿ ಬಾರದೇ ಹೋಗಲಿ ನಾವು ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಆ ಕೆಲಸವನ್ನು ಕೂಡ ನಾವು ಮಾಡುತ್ತೇವೆ. ಮತ್ತೆ ಜಿಲ್ಲಾಧಿಕಾರಿಗಳಿಗೆ ಏನು ಸೂಚನೆ ಕೊಟ್ಟಿದ್ದೆವು ಅದು ಅನುಷ್ಠಾನಕ್ಕೆ ಬಂದಿದೆ. ಈ ಒಂದು ಕಾರ್ಯಕ್ರಮ ತಹಶೀಲ್ದಾರ್, ನಮ್ಮ ಇಲಾಖೆ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಇವರೆಲ್ಲರ ಸಹಯೋಗದಿಂದ ಬಹಳ ಚೆನ್ನಾಗಿ ಆಗಿದೆ, ಎಲ್ಲೂ ಗೊಂದಲ ಇಲ್ಲ. ನಾನೇ ಸುಮಾರು 10–15 ಜಾಗಗಳಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅನಿರೀಕ್ಷಿತವಾದ ಭೇಟಿ ಕೊಟ್ಟು ಕೂಡ ನೋಡಿಕೊಂಡು ಬಂದಿದ್ದೇವೆ. ಈಗ ಪರಿಸ್ಥಿತಿ ಸಂಪೂರ್ಣ ತಹಬದಿಯಲ್ಲಿದೆ. ಮತ್ತೆ ಶಿಕ್ಷಕರ ಸಮಯದ ಬಗ್ಗೆ ಈ ಹಿಂದೆಯೂ ಕೂಡ ಬಹಳ ಮಾತನಾಡುತ್ತಿದ್ದರು. ಈಶಾನ್ಯ ಜಿಲ್ಲೆಗಳಲ್ಲಿ ಇದನ್ನು ಜಾರಿಗೆ ತಂದಾಗ ಶಿಕ್ಷಕರು ಅಡುಗೆ ಮಾಡುತ್ತಾರೆಂದು ಹೇಳಿದರು. ಆದರೆ ನಾನು ನೋಡಿದ ಕಡೆ ಎಲ್ಲಿಯೂ ಆ ರೀತಿ ಮಾಡುತ್ತಿಲ್ಲ. ನಾನು ಮತ್ತು ನಮ್ಮ ಆಯುಕ್ತರು ಅನೇಕ ಕಡೆಗಳಿಗೆ ಹೋಗಿದ್ದೆವು. ಹಲವಾರು ಕಡೆಗಳಲ್ಲಿ ಊಟದ ಸಮಯದಲ್ಲಿ ನಾವು ಯಾರಿಗೂ ಹೇಳದೇ ಹೋಗಿದ್ದೆವು. ಅಲ್ಲಿ ಆ ಊಟದ ಸಮಯದಲ್ಲಿ ಮಾತ್ರ ಮುಖ್ಯೋಪಾಧ್ಯಾಯರು ಮತ್ತು ಬಹುಶಃ ಒಬ್ಬ ಶಿಕ್ಷಕರು ಇರುತ್ತಿದ್ದರು. ಆ ಸಮಯದಲ್ಲಿ ಮಕ್ಕಳನ್ನು ಸೂಪರ್‌ವೈಜ್ ಮಾಡಿ ಕೂರಿಸುವುದಕ್ಕೆ ಇರುತ್ತಿದ್ದರೇ ಹೊರತು ಸ್ತ್ರೀ ಶಕ್ತಿಗಳ ಗುಂಪುಗಳು ಅಡುಗೆ ಮಾಡುತ್ತಾರೆ. ಈಗ ಒಬ್ಬ ಮುಖ್ಯ ಅಡುಗೆಯವರು ಇಬ್ಬರು ಸಹಾಯಕರುಗಳನ್ನು ಕೊಡುತ್ತಿದ್ದೇವೆ ಅಂದರೆ ಎಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಇದೆ ಅಲ್ಲಿ ಈಗ 44 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಅಡುಗೆ ಮಾಡುವವರನ್ನೇ ನೇಮಕ ಮಾಡಿದ್ದೇವೆ. ಶಿಕ್ಷಕರು ಜಂದು ಅಡುಗೆ ಮಾಡುವ ಕೆಲಸ ಇಲ್ಲ. ಖಂಡಿತ ಇಲ್ಲ. ಆದರೆ ಒಂದು ನಿಜ. ಆ ಸಮಯದಲ್ಲಿ ಶಿಕ್ಷಕರು ಇದ್ದು ನಾನು ಹೇಳಿದ ಹಾಗೆ ಅಲ್ಲಿ ಸೂಪರ್‌ವೈಜ್ ಮಾಡಿದ್ದು ನಿಜ. ಆದರೆ ಈಗ ಬರುತ್ತಾ ಬರುತ್ತಾ ಅದೂ ಕೂಡ ಕಡಿಮೆಯಾಗಿದೆ. ಶಿಕ್ಷಕರೇ ಅಡುಗೆ ಮಾಡಿ ಬಿಡುತ್ತಾರೆಂದು ಇದೊಂದು ಸುಮ್ಮನೆ ಪ್ರಚಾರ ಆಗಿಬಿಟ್ಟಿತು. ನಾವೇ ಹೋಗಿ ನೋಡಿದೆವು ಎನ್ನುವುದು; ಇದು ಎಂಡ್‌ಲೆಸ್ ಪ್ರಚಾರ. ಇದು ಆಗಿಲ್ಲ. ಈ ಕೆಲಸ ಆಗಿಲ್ಲ.....

ಶ್ರೀ ಬಿ ಸೋಮಶೇಖರ್ : ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು : ಅವರು ಇನ್ನೂ ಮುಗಿಸಿಲ್ಲ. ಆಮೇಲೆ ಕೇಳಿ.

ಶ್ರೀ ಬಿ. ಚಂದ್ರಶೇಖರ್ : ನಾನು ಒಂದೇ ಒಂದು ವಾಕ್ಯದಲ್ಲಿ ಮುಗಿಸುತ್ತೇನೆ. ನಾನು ಇನ್ನೂ ಮುಗಿಸಿಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, It may pre-empt our subject which is already in the agenda under Rule, 69. It may pre-empt our discussion. Kindly tell the Hon. Minister that it can be taken up in detail.

ಅಧ್ಯಕ್ಷರು : ನಿಯಮ 69ರ ಪ್ರಕಾರ ಒಂದುಗಂಟೆ ಎರಡು ಗಂಟೆ ಚರ್ಚೆಗೆ ತೆಗೆದುಕೊಳ್ಳುತ್ತೇವೆಯಲ್ಲ, ಆಗ ತಾವು ಉತ್ತರ ಹೇಳಿ.

ಪ್ರೊ: ಬಿ.ಕೆ. ಚಂದ್ರಶೇಖರ್ : ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ....

ಅಧ್ಯಕ್ಷರು : ಇದು ಈ ಸದನದ ತೀರ್ಮಾನ. ಆಗ ತಾವೂ ಮಾತನಾಡಿ. ತಮಗೆ ಮೊದಲು ಅವಕಾಶ ಕೊಡುತ್ತೇನೆ. ನಾನು ಸದನದ ತೀರ್ಮಾನವನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ.

5.20 ಪಿಎಂ

ನಿಯಮ 69ರ ಅಡಿಯಲ್ಲಿ ಚರ್ಚಿಸಲು ಈಗಾಗಲೇ ಆ ವಿಷಯ ಅಡ್ಮಿಟ್ ಆಗಿದೆ. ಅದು ನಾಳೆ ಅಥವಾ ನಾಡಿದ್ದು ಬರುತ್ತದೆ. ಆಗ 2-3 ಗಂಟೆಗಳ ಕಾಲ ಚರ್ಚೆ ಮಾಡಿ, ನಿಮಗೇ ಮೊದಲು ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೇ, ಶ್ರೀ ನಾರಾಯಣಸ್ವಾಮಿಯವರದ್ದು ಒಂದು ಪ್ರಶ್ನೆ ಇದೆ.

ಅಧ್ಯಕ್ಷರು : ಇಲ್ಲ, ಈಗ ಪ್ರಶ್ನೆ ವೇಳೆ ಮುಗಿದು ಹೋಯಿತು. ನಾನು ಹಿಂದೆ ಅವರನ್ನು ಕರೆದಿದ್ದೆ. ಪ್ರಶ್ನೋತ್ತರ 5 ಗಂಟೆ 5 ನಿಮಿಷಕ್ಕೆ ಪ್ರಾರಂಭವಾಯಿತು. ಈಗಾಗಲೇ ಒಂದು ಗಂಟೆ ಮುಗಿದಿದೆ. ಪ್ರಶ್ನೋತ್ತರದ ವೇಳೆ ಮುಗಿದು ಹೋಗಿದೆ.

ಗೊಂದಲ

ಶ್ರೀ ವಿಶ್ವೇಶ್ವರ ಹೆಗಡೆ : ಅವರ ಪ್ರಶ್ನೆ ಒಳ್ಳೆಯದಿದೆ. ಅವರಿಗೊಂದು ಅವಕಾಶ ಕೊಡಿ.

ಶ್ರೀ ಎ. ನಾರಾಯಣ ಸ್ವಾಮಿ : ಮಂತ್ರಿಗಳೂ ಇದ್ದಾರೆ, ಉತ್ತರ ಕೊಡುತ್ತಾರೆ. ದಯವಿಟ್ಟು ಅವಕಾಶ ಕೊಡಿ.

ರಾಜ್ಯದಲ್ಲಿ ವಸತಿ ಯೋಜನೆಯ ಅನುಷ್ಠಾನದಲ್ಲಿ ವಿಳಂಬದಿಂದ ಸಾರ್ವಜನಿಕರಿಗೆ ಆಗಿರುವ ತೊಂದರೆ ಕುರಿತು

526 (4572) : ಶ್ರೀ ನಾರಾಯಣ ಸ್ವಾಮಿ ಎ (ಆನೇಕಲ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ವಸತಿ ಯೋಜನೆಯಲ್ಲಿ ಬಿಡುಗಡೆಯಾಗಿರುವ ಆಶ್ರಯ, ಅಂಬೇಡ್ಕರ್, ಐ.ಎ.ವೈ ಮನೆಗಳ ವಿವರಗಳೇನು; (ಜಿಲ್ಲಾವಾರು ವಿವರ ನೀಡುವುದು)

ಆ) ಸದರಿ ಯೋಜನೆಗಳಿಗೆ ಹಣ ಬಿಡುಗಡೆ ಮಾಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮವೇನು;

ಇ) ಸದರಿ ಯೋಜನೆಗಳ ಅನುಷ್ಠಾನ ವಿಳಂಬದಿಂದ ಸಾರ್ವಜನಿಕರಿಗೆ ಆಗಿರುವ ತೊಂದರೆಗಳೇನು; ವಿವರ ನೀಡುವುದು?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು):

ಅ) 2000-01 ರಿಂದ 2002-03ರವರೆಗೆ ಆಶ್ರಯ, ಅಂಬೇಡ್ಕರ್ ವಸತಿ-ಯೋಜನೆಯಡಿಯಲ್ಲಿ 6,40,489 ಮನೆಗಳು ಹಾಗೂ ಐ.ಎ.ವೈ. ಯೋಜನೆಯಡಿ 97,295 ಮನೆಗಳು ಮಂಜೂರಾಗಿವೆ. ಜಿಲ್ಲಾವಾರು ವಿವರವನ್ನು ಅನುಬಂಧ-ಅ ಮತ್ತು ಆ ನಲ್ಲಿ ನೀಡಲಾಗಿದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.